Akashvani: Bangalore
National Bulletin In Kannada
14.05.2026: 13.10hrs

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

14.05.2026: 13.10hrs

********

**ಮುಖ್ಯಾಂಶಗಳು**

1. ಬೀಜಿಂಗ್‌ನಲ್ಲಿ ಅಮೆರಿಕ-ಚೀನಾ ಅಧ್ಯಕ್ಷರ ನಡುವೆ ಮಹತ್ವದ ದ್ವಿಪಕ್ಷೀಯ ಸಮಾಲೋಚನೆ
2. ದೆಹಲಿಯಲ್ಲಿ ಬ್ರಿಕ್ಸ್ ವಿದೇಶಾಂಗ ಸಚಿವರ ಶೃಂಗಸಭೆ ; ಜಾಗತಿಕ, ಪ್ರಾದೇಶಿಕ ವಿಷಯಗಳ ಕುರಿತು ಚರ್ಚೆ
3. ಕೇರಳಂನ ನೂತನ ಮುಖ್ಯಮಂತ್ರಿಯಾಗಿ ವಿ.ಡಿ.ಸತೀಸನ್ ಆಯ್ಕೆ
4. ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ ; ನಾಲ್ವರು ಪ್ರಮುಖ ಆರೋಪಿಗಳ ಬಂಧನ
5. ಐಪಿಎಲ್ ಟಿ-೨೦ ಕ್ರಿಕೆಟ್ ; ಇಂದು ಪಂಜಾಬ್ ಕಿಂಗ್ಸ್-ಮುಂಬೈ ಇಂಡಿಯನ್ಸ್ ತಂಡಗಳ ನಡುವೆ ಹಣಾಹಣಿ

**********

ಬೀಜಿಂಗ್‌ನಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ನಡುವಿನ ದ್ವಿಪಕ್ಷೀಯ ಮಾತುಕತೆ ಆರಂಭವಾಗಿವೆ. ಆರಂಭಿಕ ಭಾಷಣದಲ್ಲಿ ಜಿನ್‌ಪಿಂಗ್ ಮಾತನಾಡಿ, ಚೀನಾ ಮತ್ತು ಅಮೆರಿಕ ಪ್ರತಿಸ್ಪರ್ಧಿಗಳಲ್ಲ, ಪಾಲುದಾರರಾಗಿರಬೇಕು. ಟ್ರಂಪ್ ಅವರೊಂದಿಗೆ ಚರ್ಚೆ ನಡೆಸಲು ಮತ್ತು ಚೀನಾ-ಅಮೆರಿಕ ಸಂಬಂಧಗಳ ದೈತ್ಯ ಹಡಗನ್ನು ಮುನ್ನಡೆಸಲು ಒಟ್ಟಾಗಿ ಕೆಲಸ ಮಾಡಲು ಎದುರು ನೋಡುತ್ತಿದ್ದೇನೆ. ೨೦೨೬ ಅನ್ನು ಹೊಸ ಅಧ್ಯಾಯವನ್ನು ತೆರೆಯುವ ಐತಿಹಾಸಿಕ ಹೆಗ್ಗುರುತು ವರ್ಷವನ್ನಾಗಿ ಮಾಡಲು ಇದು ಸಾಧ್ಯ ಎಂದು ಅವರು ಹೇಳಿದರು. ಡೋನಾಲ್ಡ್ ಟ್ರಂಪ್ ಮಾತನಾಡಿ, ಜಿನ್‌ಪಿಂಗ್ ಶ್ರೇಷ್ಠ ನಾಯಕ. ಎರಡು ಮಹಾಶಕ್ತಿಗಳ ನಡುವಿನ ಸಂಬಂಧವು ಹಿಂದೆಂದಿಗಿಂತಲೂ ಉತ್ತಮವಾಗಿರುತ್ತದೆ ಎಂದು ಹೇಳಿದರು. ಇದಕ್ಕೂ ಮೊದಲು, ಗ್ರೇಟ್ ಹಾಲ್ ಆಫ್ ದಿ ಪೀಪಲ್ ಪ್ರವೇಶದ್ವಾರದಲ್ಲಿ ಡೊನಾಲ್ಡ್

ಟ್ರಂಪ್ ಅವರಿಗೆ ಭವ್ಯ ಸ್ವಾಗತ ದೊರೆಯಿತು. ಕ್ಸಿ ಜಿನ್‌ಪಿಂಗ್ ಅವರೊಂದಿಗೆ ಎರಡು ದಿನಗಳ ಶೃಂಗಸಭೆಗಾಗಿ ಅಮೆರಿಕ ಅಧ್ಯಕ್ಷರು ನಿನ್ನೆ ಸಂಜೆ ಬೀಜಿಂಗ್‌ಗೆ ಆಗಮಿಸಿದರು. ಇರಾನ್ ಯುದ್ಧ, ಜಾಗತಿಕ ಇಂಧನ ಬಿಕ್ಕಟ್ಟು, ವ್ಯಾಪಾರ ಉದ್ವಿಗ್ನತೆ, ತೈವಾನ್ ಮತ್ತು ಕೃತಕ ಬುದ್ಧಿಮತ್ತೆ ಕುರಿತು ಮಹತ್ವದ ಚರ್ಚೆ ನಡೆಸಲಾಗುತ್ತಿದೆ. ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯಲು ಮತ್ತು ಕೊಲ್ಲಿಯಲ್ಲಿನ ಉದ್ವಿಗ್ನತೆಯನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿರುವ ಹೊಸ ಮಾತುಕತೆಗಳನ್ನು ಪ್ರೋತ್ಸಾಹಿಸಲು ಟೆಹ್ರಾನ್‌ನೊಂದಿಗೆ ಚೀನಾದ ಪ್ರಭಾವವನ್ನು ಬಳಸಲು ಟ್ರಂಪ್ ಕ್ಸಿ ಜಿನ್‌ಪಿಂಗ್ ಅವರನ್ನು ಒತ್ತಾಯಿಸುವ ಸಾಧ್ಯತೆಯಿದೆ. ಆರ್ಥಿಕ ಸಂಬಂಧಗಳು ಶೃಂಗಸಭೆಯ ಹೃದಯಭಾಗದಲ್ಲಿ ಉಳಿಯುವ ನಿರೀಕ್ಷೆಯಿದೆ, ಎರಡೂ ಕಡೆಯವರು ಅಸ್ತಿತ್ವದಲ್ಲಿರುವ ವ್ಯಾಪಾರ ಒಪ್ಪಂದದ ವಿಸ್ತರಣೆಯ ಬಗ್ಗೆ ಚರ್ಚಿಸುತ್ತಿದ್ದಾರೆ. ಬೋಯಿಂಗ್ ವಿಮಾನಗಳು, ಕೃಷಿ ರಫ್ತುಗಳು ಮತ್ತು ಇಂಧನ ಉತ್ಪನ್ನಗಳು ಸೇರಿದಂತೆ ಅಮೆರಿಕದ ಸರಕುಗಳ ಚೀನಾದ ಖರೀದಿಯನ್ನು ಹೆಚ್ಚಿಸುವುದು ಮಾತುಕತೆಗಳಲ್ಲಿ ಸೇರಿರಬಹುದು.

**********

ದೆಹಲಿಯಲ್ಲಿ ಇಂದಿನಿಂದ ಎರಡು ದಿನಗಳ ಬ್ರಿಕ್ಸ್ ವಿದೇಶಾಂಗ ಸಚಿವರ ಶೃಂಗಸಭೆ ಆರಂಭವಾಗಿದ್ದು, ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಸಭೆಯ ಅಧ್ಯಕ್ಷತೆ ವಹಿಸಿದ್ದಾರೆ. ಸಭೆಯಲ್ಲಿ ಬ್ರಿಕ್ಸ್ ವಿದೇಶಾಂಗ ಸಚಿವರು ಮತ್ತು ಸದಸ್ಯ ರಾಷ್ಟ್ರಗಳ ನಿಯೋಗದ ಮುಖ್ಯಸ್ಥರು ಭಾಗವಹಿಸಿದ್ದಾರೆ. ಸಭೆಯ ನಂತರ ವಿವಿಧ ರಾಷ್ಟ್ರಗಳ ಪ್ರಮುಖರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಲಿದ್ದಾರೆ. ಈ ಸಭೆಯಲ್ಲಿ, ಪರಸ್ಪರ ಹಿತಾಸಕ್ತಿಯ ಜಾಗತಿಕ ಮತ್ತು ಪ್ರಾದೇಶಿಕ ವಿಚಾರಗಳ ಬಗ್ಗೆ, ಸಮಾಲೋಚನೆ ನಡೆಸಲಿದ್ದಾರೆ. ಸಭೆಯ ನೇಪಥ್ಯದಲ್ಲಿ ಡಾ.ಎಸ್.ಜೈಶಂಕರ್ ಹಲವು ದ್ವಿಪಕ್ಷೀಯ ಸಭೆಗಳನ್ನು ನಡೆಸುವ ನಿರೀಕ್ಷೆಯಿದೆ. ಬ್ರಿಕ್ಸ್ ವಿದೇಶಾಂಗ ಸಚಿವರ ಶೃಂಗಸಭೆಯಲ್ಲಿ ಭಾಗವಹಿಸುವ ಸಲುವಾಗಿ ಇರಾನ್‌ನ ವಿದೇಶಾಂಗ ಸಚಿವ, ಸೈಯದ್ ಅಬ್ಬಾಸ್, ರಷ್ಯಾದ ವಿದೇಶಾಂಗ ಸಚಿವ ಸರ್ಗ್ಯೆ ಲಾವ್ರೋವ್, ಮಾಲ್ದೀವ್ಸ್ ವಿದೇಶಾಂಗ ವ್ಯವಹಾರಗಳ ಸಚಿವೆ ಇರುತಿಶಂ ಅಧಮ್ ಸೇರಿದಂತೆ ಹಲವು ರಾಷ್ಟ್ರಗಳ ಪ್ರತಿನಿಧಿಗಳು ದೆಹಲಿಗೆ ಆಗಮಿಸಿದ್ದಾರೆ.

**********

ಕೇರಳಂನ ೧೩ನೇ ಮುಖ್ಯಂತ್ರಿಯಾಗಿ ವಿ.ಡಿ.ಸತೀಸನ್ ಆಯ್ಕೆಯಾಗಿದ್ದಾರೆ. ದೆಹಲಿಯಲ್ಲಿ ಕಾಂಗ್ರೆಸ್‌ನ ಉನ್ನತ ನಾಯಕರಾದ ದೀಪದಾರ್ ಮುನ್ಶಿ, ಮುಕುಲ್ ವಾಸ್ನಿಕ್ ಹಾಗೂ ಅಜಯ್ ಮಾಕೇನ್ ಈ ಘೋಷಣೆ ಮಾಡಿದ್ದಾರೆ. ಕೇರಳಂನಲ್ಲಿ ನೂತನ ಮುಖ್ಯಮಂತ್ರಿ ಆಯ್ಕೆ, ಬಿಕ್ಕಟ್ಟು ಕೊನೆಗೂ ನಿವಾರಣೆಯಾಗಿದೆ. ಕಳೆದ ಒಂದು ವಾರದಿಂದ ನಡೆದ ವ್ಯಾಪಕ ಸಮಾಲೋಚನೆಗಳ ನಂತರ ಸ್ಥಳೀಯ ಮುಖಂಡ ಸತೀಸನ್ ಅವರನ್ನು ಕಾಂಗ್ರೆಸ್ ಹೈಕಮಾಂಡ್ ಆಯ್ಕೆ ಮಾಡಿದೆ.

**********

ಬರುವ ಸೆಪ್ಟೆಂಬರ್ ೨೦೨೬ ರವರೆಗೆ ಅಥವಾ ಮುಂದಿನ ಆದೇಶದವರೆಗೆ ಜಾರಿಗೆ ಬರುವಂತೆ ಕಚ್ಚಾ ಸಕ್ಕರೆ, ಬಿಳಿ ಸಕ್ಕರೆ ಮತ್ತು ಸಂಸ್ಕರಿಸಿದ ಸಕ್ಕರೆ ಸೇರಿದಂತೆ ಸಕ್ಕರೆಯ ರಫ್ತು ನಿಷೇಧಿಸಿದೆ. ವಿದೇಶಿ ವ್ಯಾಪಾರ ನಿರ್ದೇಶನಾಲಯ ರಫ್ತು ನೀತಿಯನ್ನು 'ನಿರ್ಬಂಧಿತ' ದಿಂದ 'ನಿಷೇಧಿತ' ವಲಯಕ್ಕೆ ತಿದ್ದುಪಡಿ ಮಾಡಿ ಆದೇಶಿಸಿದೆ.

**********

ನೀಟ್ ಯುಜಿ ೨೦೨೬ರ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ತನಿಖಾ ದಳ, ಸಿಬಿಐ, ನಾಲ್ವರು ಪ್ರಮುಖ ಆರೋಪಿಗಳನ್ನು ಬಂಧಿಸಿದೆ. ಆರೋಪಿಗಳನ್ನು ಮಂಗಿಲಾಲ್ ಬಿವಾಲ್, ದಿನೇಶ್ ಬಿವಾಲ್, ಹರಿಯಾಣ ನಿವಾಸಿ ಯಶ್ ಯಾದವ್ ಮತ್ತು ಮಂಗಿಲಾಲ್ ಅವರ ಮಗ ವಿಕಾಸ್ ಎಂದು ಗುರುತಿಸಲಾಗಿದೆ. ನಾಲ್ವರನ್ನೂ ಜೈಪುರದಿಂದ ಬಂಧಿಸಿ ನಿನ್ನೆ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲಾಯಿತು. ನಂತರ ಅವರನ್ನು ಹೆಚ್ಚಿನ ವಿಚಾರಣೆಗಾಗಿ ದೆಹಲಿಗೆ ಸ್ಥಳಾಂತರಿಸಲಾಯಿತು. ತನಿಖಾ ಅಧಿಕಾರಿಗಳ ಪ್ರಕಾರ, ಆರೋಪಿ ಯಶ್ ಯಾದವ್ ಮತ್ತು ವಿಕಾಸ್ ಈ ಹಿಂದೆ ರಾಜಸ್ಥಾನದ ಸಿಕಾರ್ ಜಿಲ್ಲೆಯ ನೀಟ್ ತರಬೇತಿ ಸಂಸ್ಥೆಯಲ್ಲಿ ಒಟ್ಟಿಗೆ ಅಧ್ಯಯನ ಮಾಡಿದ್ದರು. ಪ್ರಶ್ನೆ ಪತ್ರಿಕೆ ಸೋರಿಕೆಗೆ ಸಂಬಂಧಿಸಿದ ಜಾಲ ಮತ್ತು ಸಮನ್ವಯವು ಆ ಅವಧಿಯಲ್ಲಿ ಬೆಳೆದಿರಬಹುದು ಎಂದು ತನಿಖಾಧಿಕಾರಿಗಳು ಶಂಕಿಸಿದ್ದಾರೆ. ತರಬೇತಿ ಸಂಸ್ಥೆಗಳು, ಮಧ್ಯವರ್ತಿಗಳು, ವಿದ್ಯಾರ್ಥಿಗಳು ಮತ್ತು ಆರೋಪಿಗಳೊಂದಿಗೆ ಸಂಬಂಧ ಹೊಂದಿರುವ ಇತರ ವ್ಯಕ್ತಿಗಳ ನಡುವಿನ ಸಂಭಾವ್ಯ ಸಂಪರ್ಕಗಳ ಬಗ್ಗೆ ಸಿಬಿಐ ಈಗ ತನಿಖೆ ನಡೆಸುತ್ತಿದೆ. ಈ ನಡುವೆ, ತನಿಖೆ ಮತ್ತಷ್ಟು ವಿಸ್ತರಿಸಿದೆ. ಇತ್ತೀಚೆಗೆ ನೀಟ್ ಅರ್ಹತೆ ಪಡೆದು ವೈದ್ಯಕೀಯ ಕಾಲೇಜುಗಳಿಗೆ

ಪ್ರವೇಶ ಪಡೆದ ಆರೋಪಿಗಳ ಕುಟುಂಬ ಸದಸ್ಯರು ಮತ್ತು ಸಂಬಂಧಿಕರ ಪಾತ್ರವನ್ನು ಸಹ ಸಂಸ್ಥೆ ಪರಿಶೀಲಿಸುತ್ತಿದೆ.

**********

ಭಾರತ-ಆಫ್ರಿಕಾ ಸಹಯೋಗದ ಮುಂದಿನ ಹಂತವು ಹೆಚ್ಚಿನ ಮೌಲ್ಯದ ಉತ್ಪನ್ನಗಳು ಮತ್ತು ಸಂಯೋಜಿತ ಪೂರೈಕೆ ಸರಪಳಿಗಳ ಮೇಲೆ ನಿರ್ಮಿಸಲಾಗುವುದು ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ. ನವದೆಹಲಿಯಲ್ಲಿ ನಿನ್ನೆ ನಡೆದ ಭಾರತ-ಆಫ್ರಿಕಾ ವ್ಯವಹಾರ ಸಂವಾದ ಪ್ರದರ್ಶನ ಮತ್ತು ಭಾರತ-ಆಫ್ರಿಕಾ ವೇದಿಕೆ ಶೃಂಗಸಭೆಯ ಹಿನ್ನೆಲೆಯಲ್ಲಿ ಮಾತನಾಡಿದ ಸಚಿವರು, ಕೃಷಿ, ಡಿಜಿಟಲ್ ಮೂಲಸೌಕರ್ಯ, ಆರೋಗ್ಯ ರಕ್ಷಣೆ ಮತ್ತು ಶುದ್ಧ ಇಂಧನ ಉತ್ಪಾದನೆ ಮತ್ತು ತಂತ್ರಜ್ಞಾನ ಪಾಲುದಾರಿಕೆಯವರೆಗೆ ಉಭಯ ದೇಶಗಳ ಬಾಂಧವ್ಯ ಗಟ್ಟಿಯಾಗಿದೆ ಎಂದು ಹೇಳಿದ್ದಾರೆ.

**********

ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ತಮ್ಮ ವಿದೇಶ ಪ್ರವಾಸಕ್ಕಾಗಿ ಕೋಟ್ಯಾಂತರ ರೂಪಾಯಿ ವೆಚ್ಚ ಮಾಡುತ್ತಿದ್ದಾರೆ. ಆದರೆ ಕೇಂದ್ರ ಸರ್ಕಾರದ ವಿರುದ್ಧ ವಿದೇಶಿ ಪ್ರವಾಸ ವಿಷಯದಲ್ಲಿ ಅನಗತ್ಯ ಆರೋಪ ಮಾಡುತ್ತಿರುವುದು ಸರಿಯಲ್ಲ ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರ ಟೀಕಿಸಿದ್ದಾರೆ. ರಾಹುಲ್ ಗಾಂಧಿ, ಯಾವುದೇ ನಿಯೋಗ, ಸದನ ಸಮಿತಿಗಳ ಸದಸ್ಯರಾಗಿ ವಿದೇಶಿ ಪ್ರವಾಸ ಕೈಗೊಳ್ಳುವುದಿಲ್ಲ. ವೈಯಕ್ತಿಕವಾಗಿ ಪ್ರವಾಸ ಕೈಗೊಳ್ಳುವವರು ಕೇಂದ್ರ ಸರ್ಕಾರವನ್ನು ಟೀಕಿಸುವುದು ಸರಿಯಲ್ಲ ಎಂದು ಹೇಳಿದರು.

**********

ನೌಕರರ ಭವಿಷ್ಯನಿಧಿ-ಇಪಿಎಫ್‌ಒ ಭವಿಷ್ಯನಿಧಿ ಹಿಂಪಡೆಯುವಿಕೆ ಕ್ಲೇಮ್‌ಗಳನ್ನು ಇತ್ಯರ್ಥಪಡಿಸುವ ಪ್ರಕ್ರಿಯೆಯನ್ನು ಸ್ವಯಂ ಚಾಲಿತಗೊಳಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆ. ಈ ಕುರಿತು ಕಾರ್ಯಕ್ರಮವೊಂದರಲ್ಲಿ ಮಾತನಾಡಿರುವ ಇಪಿಎಫ್‌ಒ ಕೇಂದ್ರ ಭವಿಷ್ಯನಿಧಿ ಆಯುಕ್ತ ರಮೇಶ್ ಕೃಷ್ಣಮೂರ್ತಿ, ಸರ್ಕಾರವು ಅಂತಿಮ ಇಪಿಎಫ್‌ಒ ಹಿಂಪಡೆಯುವಿಕೆಯನ್ನು ಸ್ವಯಂಚಾಲಿತಗೊಳಿಸುವತ್ತ ಕಾರ್ಯೋನ್ಮುಖವಾಗಿದೆ. ಇಪಿಎಫ್‌ಒ ಸದಸ್ಯರು

ಉದ್ಯೋಗದಾತರನ್ನು ಬದಲಿಸಿದರೆ ಭವಿಷ್ಯ ನಿಧಿ ಖಾತೆಗಳ ಸ್ವಯಂ ಇತ್ಯರ್ಥ ಮತ್ತು ಸ್ವಯಂ ವರ್ಗಾವಣೆಗಾಗಿ ಇಪಿಎಫ್‌ಒ ಕಾರ್ಯನಿರ್ವಹಿಸುತ್ತಿದೆ. ಸದ್ಯ, ೭ ಕೋಟಿಗೂ ಅಧಿಕ ಸದಸ್ಯರನ್ನು ಇಪಿಎಫ್‌ಒ ಒಳಗೊಂಡಿದೆ ಎಂದು ಹೇಳಿದ್ದಾರೆ.

**********

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ-ಎನ್‌ಡಿಆರ್‌ಎಫ್ ೨೦ ವರ್ಷಗಳ ಅಲ್ಪಾವಧಿಯಲ್ಲಿ ದೇಶಾದ್ಯಂತ ೧೪೦ ಕೋಟಿ ಜನರ ವಿಶ್ವಾಸ ಗಳಿಸಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಗಾಜಿಯಾಬಾದ್‌ನಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ ರಾಷ್ಟ್ರಪತಿಗಳ ಬಣ್ಣ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿ, ದೇಶಾದ್ಯಂತ ಎಲ್ಲೆಲ್ಲಿ ವಿಪತ್ತು ಸಂಭವಿಸಿದೆಯೋ ಅಥವಾ ಸಂಭವಿಸಬಹುದೋ, ಅಂತಹ ಸ್ಥಳಗಳಿಗೆ ಎನ್‌ಡಿಆರ್‌ಎಫ್ ಸಿಬ್ಬಂದಿ ತಲುಪಿದಾಗ ಜನರು ನೆಮ್ಮದಿಯ ನಿಟ್ಟುಸಿರು ಬಿಡುತ್ತಾರೆ ಎಂದು ಹೇಳಿದರು. ಯಾವುದೇ ಪಡೆಗೆ, ರಾಷ್ಟ್ರಪತಿಗಳ ಬಣ್ಣಗಳ ಗೌರವವನ್ನು ಪಡೆಯುವುದು ಅಪಾರ ಹೆಮ್ಮೆಯ ವಿಷಯ. ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಪಂಚಾಯತ್ ರಾಜ್, ಯಂತ್ರೋಪಕರಣಗಳು, ಎನ್‌ಸಿಸಿ, ಎನ್‌ಎಸ್‌ಎಸ್ ಮತ್ತು ಸೇವೆಯಲ್ಲಿ ತೊಡಗಿರುವ ವಿಪತ್ತು ಪರಿಹಾರ ಕಾರ್ಯ ಶ್ಲಾಘನೀಯ ಎಂದರು.

**********

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ದೆಹಲಿಯಲ್ಲಿ ನಿನ್ನೆ ಭಾರತ್ ಇನೋವೇಟ್ಸ್-೨೦೨೬ರ ಭಾಗವಾಗಿ, ಉದ್ಯಮದ ನಾಯಕರೊಂದಿಗೆ ದುಂಡು ಮೇಜಿನ ಸಭೆ ನಡೆಸಿದರು. ಸಭೆಯಲ್ಲಿ ಭಾರತದ ಡಿಪ್ ಟೆಕ್ ಮತ್ತು ಸಂಶೋಧನೆ ಆಧಾರಿತ ನಾವೀನ್ಯತಾ ಪೂರಕ ವ್ಯವಸ್ಥೆ ರೂಪಿಸಲು ಜಾಗತಿಕ ನಾಯಕರು ಹಾಗೂ ಸಂಸ್ಥೆಗಳ ಪಾಲುದಾರರೊಂದಿಗೆ ಅವರು ಸಮಗ್ರ ಚರ್ಚೆ ನಡೆಸಿದರು. ಈ ವೇಳೆ ಸಚಿವರು ಮಾತನಾಡಿ, ಭಾರತದ ನಾವೀನ್ಯತಾ ಪೂರಕ ವ್ಯವಸ್ಥೆಯಲ್ಲಿ ಐಐಟಿಗಳು, ಐಐಎಸ್‌ಸಿ ಮತ್ತು ಇತರೆ ೨ ಹಾಗೂ ಮೂರನೇ ಶ್ರೇಣಿಯ ನಗರಗಳ ಪ್ರಮುಖ ಸಂಶೋಧನಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳು ಕೃತಕಬುದ್ಧಿಮತ್ತೆ, ಸೆಮಿಕಂಡೆಕ್ಟರ್, ಕ್ಲೈಮೆಟ್ ಟೆಕ್, ಸರಕು ಸಾಗಾಣೆ, ಆರೋಗ್ಯ ತಂತ್ರಜ್ಞಾನ, ಅತ್ಯಾಧುನಿಕ ಉತ್ಪಾದನೆ ಸೇರಿದಂತೆ, ಹಲವು ವಲಯಗಳಲ್ಲಿ ಹೊಸ ಹೊಸ ನಾವೀನ್ಯತಾ ಕ್ರಮಗಳ

ಸಂಶೋಧನೆಗಳನ್ನು ಕೈಗೊಂಡಿವೆ. ಇದರಿಂದಾಗಿ ಭಾರತ, ಪ್ರಮುಖ ನಾವೀನ್ಯತಾ ಪಾಲುದಾರ ಎಂದು ಜಾಗತಿಕ ಮಟ್ಟದಲ್ಲಿ ಗುರುತಿಸುವಂತಾಗಿದೆ ಎಂದು ತಿಳಿಸಿದ್ದಾರೆ.

**********

ಧರ್ಮಶಾಲಾದ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಐಪಿಎಲ್ ಟಿ-೨೦ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ - ಮುಂಬೈ ಇಂಡಿಯನ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಸಂಜೆ ೭.೩೦ಕ್ಕೆ ಆರಂಭವಾಗಲಿದೆ.

*****END*****